

ಹಬ್ಬ ಕಳೆ ಕಟ್ಟಲು ಪೂಜಿಸುವ ದೇವಾನು ದೇವತೆ– ದೇವರ ಅಲಂಕಾರ ವಿಭಿನ್ನವಾಗಿ, ಆಕರ್ಷಕವಾಗಿ ಮಾಡಿದಾಗ. ವರಮಹಾಲಕ್ಷ್ಮಿ ಹಬ್ಬಕ್ಕೆ ಲಕ್ಷ್ಮಿಯ ಅಲಂಕಾರ, ದಸರಾಕ್ಕೆ ದೇವಿ ಅಲಂಕಾರ, ದುರ್ಗೆ ಅಲಂಕಾರ, ಸರಸ್ವತಿ ಪೂಜೆ ಇದ್ದಾಗ ಸರಸ್ವತಿಯ ಅಲಂಕಾರ, ಮಂಗಳಗೌರಿ, ತುಳಜಾ ಭವಾನಿ, ಗೌರಿ, ಯಲ್ಲಮ್ಮ ದೇವಿ... ಹೀಗೆ ಆಯಾಯ ದೇವಿಗೆ ಪ್ರಿಯವಾದ ಹೂವು, ಹಣ್ಣು, ತಿಂಡಿ ತಿನಿಸುಗಳನ್ನು ಇಟ್ಟು ನೈವೇದ್ಯ ಸಲ್ಲಿಸಿ ಪೂಜೆ ಮಾಡಿದಾಗಲೇ ಹಬ್ಬಕ್ಕೆ ಅರ್ಥ ಬರುವುದು.

ದೇವಿಯ ಅಲಂಕಾರ ಮಾಡಿದ ಹಾಗೆ ಲಕ್ಷ್ಮಿಯ ಅಲಂಕಾರ ಇರುವುದಿಲ್ಲ. ಸ್ವಲ್ಪ ಕಲಾತ್ಮಕತೆ, ಚಾಕಚಕ್ಯತೆ ಇದ್ದರೆ ದೇವರ ಅಲಂಕಾರ ಶೋಭಿಸುತ್ತದೆ. ನೆರೆದವರ ಗಮನ ಸೆಳೆಯುತ್ತದೆ.

ಸಾಮಾನ್ಯವಾಗಿ ಹೂವು, ಹಣ್ಣು, ವಿದ್ಯುತ್‌ದೀಪ, ಬಾಳೆ ಕಂಬ, ಮಾವಿನ ಎಲೆ, ತುಳಸಿ ಹಾರ, ತೆಂಗಿನಕಾಯಿ, ಅರಿಶಿಣ ಕುಂಕುಮಗಳಿಂದ ಕೂಡಿದ ಮಂಗಳದ್ರವ್ಯ, ದೇವಿ ಮೂರ್ತಿ ಮುಂಭಾಗದಲ್ಲಿ ಸುಂದರವಾದ ರಂಗು ರಂಗಿನ ರಂಗೋಲಿ, ಹಣತೆ ಅಥವಾ ದೀಪ.. ಇವುಗಳಿಂದ ಕೂಡಿದ ಅಲಂಕಾರ ಹಬ್ಬಕ್ಕೆ ವಿಶೇಷ ಮೆರುಗು ನೀಡುತ್ತದೆ.

ಮಹಿಳೆಯರು ಸಾಮಾನ್ಯವಾಗಿ ಹಬ್ಬದ ದಿನ ದೇವರ ಅಲಂಕಾರಕ್ಕೆ ಬಹಳ ಮುತುವರ್ಜಿ ತೋರಿಸಿ ತಾಳ್ಮೆ, ಸಂಯಮಗಳಿಂದ ದೇವರನ್ನು ಶೃಂಗರಿಸುತ್ತಾರೆ. ಹಬ್ಬಕ್ಕೆ ಹಿಂದಿನ ದಿನವೇ ಬೇಕಾದ ಎಲ್ಲ ಸಾಮಾಗ್ರಿಗಳನ್ನು ತಂದು ಜೋಡಿಸಿಟ್ಟುಕೊಂಡು ಸಾಕಷ್ಟು ಪೂರ್ವ ತಯಾರಿಯನ್ನೂ ನಡೆಸುತ್ತಾರೆ. ಇನ್ನೇನು ಕೆಲವೇ ದಿನಗಳಲ್ಲಿ ಶ್ರಾವಣ ಮಾಸ ಕಾಲಿಡುತ್ತದೆ. ಸಾಲು ಸಾಲು ಹಬ್ಬಗಳ ಸಡಗರ, ಸಂಭ್ರಮಕ್ಕೆ ನಾಂದಿ ಹಾಡಲಾಗುತ್ತದೆ.

ದೇವಿಯ ಅಲಂಕಾರಕ್ಕಾಗಿ ಸ್ಪರ್ಧೆಯನ್ನೂ ಏರ್ಪಡಿಸಲಾಗುತ್ತದೆ. ಕಳೆದ ದಸರಾದಲ್ಲಿ ಹರಿಹರದ 'ದಸರಾ ಉತ್ಸವ ಸಮಿತಿ' ವತಿಯಿಂದ 'ದೇವಿ ಅಲಂಕಾರ ಸ್ಪರ್ಧೆ' ಏರ್ಪಡಿಸಲಾಗಿತ್ತು. ದೇವಿಯ ಅಲಂಕಾರದೊಂದಿಗೆ ವಿವಿಧ ಬಗೆಯ ರಂಗೋಲಿಗಳೂ ಅಲ್ಲಿ ಮಹತ್ವದ ಸ್ಥಾನ ಪಡೆದಿದ್ದವು. ಸಾಮಾನ್ಯವಾಗಿ ಪುಡಿ ರಂಗೋಲಿ ಹಿಟ್ಟಿನ ರಂಗೋಲಿ, ಕುಂದನ್ ರಂಗೋಲಿ, ಎಲೆ, ಹೂವು ಬಳಸಿ ಬಿಡಿಸುವ ರಂಗೋಲಿ ಎಲ್ಲೆಡೆ ಇದೆ. ಆದರೆ ಇಲ್ಲಿ ಪೂಜೆಯ ಸಂದರ್ಭದಲ್ಲಿ ಬಳಸುವ ಪದಾರ್ಥಗಳಿಂದಲೇ ರಂಗೋಲಿ ಸಾಕಾರಗೊಂಡಿದ್ದು ವಿಶೇಷವಾಗಿತ್ತು. ದೇವಿಗೆ ಮಾಡಿದ ಅಲಂಕಾರ ಕಣ್ಮನ ಸೆಳೆದು ಎಲ್ಲಾ ದೇವಿಯರ ಸಾನಿಧ್ಯವೂ ಅಲ್ಲಿದೆಯೇನೋ ಎಂಬಂತೆ ಕಂಗೊಳಿಸುತ್ತಿತ್ತು. ದೇವಿಯ ಅಲಂಕಾರ, ದೇವಿಯ ಮುಂದೆ ಹಾಕಿದ ರಂಗೋಲಿಗಳು ಆ ಸ್ಥಳಕ್ಕೆ ವಿಶೇಷ ಕಳೆ ತಂದುಕೊಟ್ಟಿತ್ತು.

ಅಲಂಕಾರ ಪ್ರಿಯರೆಂದು ಖ್ಯಾತಿ ಪಡೆದ ಮಹಿಳೆಯರು ದೇವಿಯ ಅಲಂಕಾರ, ಮಾಡುವಲ್ಲಿ ಅಂದದ ರಂಗೋಲಿ ಹಾಕುವಲ್ಲಿ ತಮ್ಮ ಪ್ರತಿಭೆ, ಸೃಜನಶೀಲತೆಯನ್ನು ಅನಾವರಣಗೊಳಿಸಿದ್ದರು. ಮಹಿಳೆಯರ ಉತ್ಸಾಹ ಮುಗಿಲು ಮುಟ್ಟಿತ್ತು. ಎಲ್ಲಾ ದೇವಿಯರೂ ಒಟ್ಟಾಗಿ ಧರೆಗಿಳಿದು ಬಂದಿದ್ದರು. ಜೊತೆಗೆ 'ಸೌಂದರ್ಯ ಲಹರಿ' ಮುಂತಾದ ಶ್ಲೋಕಗಳ ಪಠಣ. ಅಲ್ಲಿ ದೇವಿಯಾರಾಧನೆಯ ಒಂದು ದಿವ್ಯತೆ ಮೇಳೈಸಿತ್ತು.

ಇದೇ ಸಂದರ್ಭ ಈ ಸಲದ ಹಬ್ಬಗಳಿಗೆ ಪೂರ್ವಭಾವಿಯಾಗಿ ಸಿದ್ಧತೆ ನಡೆಸಲು ಉತ್ತೇಜನ ನೀಡಿದೆ. ಆಯಾ ದೇವಿಯ ಪೂಜೆಗೆ ಬಳಸುವ ವಸ್ತುಗಳು, ನೈವೇದ್ಯ ಪದಾರ್ಥಗಳು, ತಂಬಿಟ್ಟಿನ ಆರತಿ, ಕಳಸದಾರತಿ, ಮಂಗಳಾರತಿ, ವೈವಿಧ್ಯವಾಗಿ ಹಚ್ಚಿಟ್ಟ ದೀಪಗಳ ಅಲಂಕಾರ.. ಎಲ್ಲವೂ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವುದರೊಂದಿಗೆ, ಇಂದಿನ ಮಕ್ಕಳಿಗೆ, ಮುಂದಿನ ಪೀಳಿಗೆಗೆ ಪೂಜೆಗೆ ಅಣಿಗೊಳಿಸಿಕೊಳ್ಳುವ ಅರಿವು ಮೂಡಿಸಿದೆ. ಬಣ್ಣಬಣ್ಣದ ರಂಗು ತುಂಬಿದ ಬಟ್ಟಲುಗಳು, ಅದರ ಮಧ್ಯೆ ಹೂವು ಪತ್ರೆಗಳು, ಬಾಚಣಿಗೆ, ಕಾಡಿಗೆ, ಡಬ್ಬಿಗಳು, ಅಡಿಕೆ, ಅರಿಶಿನ ಕೊಂಬು, ಬಳೆ ಬಿಚ್ಚೋಲೆ, ಬಣ್ಣಬಣ್ಣದ ಚೌಕಟ್ಟಿನ ಪುಟ್ಟಪುಟ್ಟ ಕನ್ನಡಿಗಳು, ಹೂವು ಪತ್ರೆ, ನಾಣ್ಯಗಳು, ಸಮೃದ್ಧಿಯನ್ನು ಸೂಸುವ ಕಾಳು ತುಂಬಿದ ಹಚ್ಚಹಸುರಿನ ಉದ್ದನೆಯ ತೆನೆಗಳು, ಚೆಂಡು ಹೂವು, ಸೇವಂತಿಗೆ, ಮೊರದ ಬಾಗಿನ ಎಲ್ಲವೂ ರಂಗೋಲಿ ಜತೆಗೆ ಮೇಳೈಸಿದರೆ ಹಬ್ಬಕ್ಕೆ ಮೆರುಗು, ವಿಶೇಷ ಕಳೆ ಬರುತ್ತದೆ.

ಮಂಗಳವನ್ನುಂಟು ಮಾಡುವ ಮಂಗಳಗೌರಿ ಸೌಮ್ಯವಾದ ಅಲಂಕಾರದೊಂದಿಗೆ ಮಂಗಳಾಂಗಿಯಾಗಿದ್ದರೆ ಅದರ ಸೊಗಸೇ ಬೇರೆ. ಸ್ವರ್ಣ ಗೌರಿಗೆ ಮೆಟ್ಟಿಲು ಮೆಟ್ಟಿಲಾಗಿ ಹಚ್ಚಿಟ್ಟ ದೀಪಗಳು, ಪೂಜಾವಿಧಾನದ ಅರಿವು ಮೂಡಿಸುವ ರಂಗೋಲಿ ಪೂಜೆ, ಕಳಸ ಪೂಜೆ, ವಾಯನ ದಾನ, ವ್ರತ ಪುಸ್ತಕ, ಅಲಂಕೃತ ಆರತಿ ತಟ್ಟೆ, ಅಂದವಾದ ರಂಗೋಲಿಯ ಚಿತ್ತಾರ ವಿನೂತನವಾಗಿ ಮೂಡಿಬಂದರೆ ಅದೇ ಚಂದಕ್ಕಿಂದ ಚಂದ. ಉಯ್ಯಾಲೆಯಲ್ಲಿ ಕುಳಿತ ಗೌರಿಯನ್ನು ಅಲಂಕರಿಸಿ ಎಡ ಬಲಗಳಲ್ಲಿ ಅಂದವಾಗಿ ಜೋಡಿಸಿಟ್ಟ ಕುಂಬಗಳು, ಆಕರ್ಷಕ ದೀಪಗಳು, ಉಡಿ ತುಂಬುವ ಪದಾರ್ಥಗಳೊಂದಿಗೆ ಸಿದ್ಧ ಮಾಡಬೇಕು. ಆನೆಯ ಮೇಲೆ ಕುಳಿತ ಗಜಗೌರಿಯನ್ನು ಅಂದವಾಗಿ ಅಲಂಕರಿಸಿ, ದೇವಿಯ ಮುಂದೆ ತೆಂಗಿನಕಾಯಿ, ಹಣ್ಣು, ಮೆಹಂದಿ ಕೋನು, ಉತ್ತುತ್ತೆ, ಕೆಂಪು ಹಸಿರು ಬಳೆಗಳು, ಅರಿಶಿನ ಕುಂಕುಮದ ಪೊಟ್ಟಣ, ಎಲೆ ಅಡಿಕೆ, ಬಾಳೆಹಣ್ಣು, ಬಾದಾಮಿ, ಗೋಡಂಬಿ ದಕ್ಷಿಣೆ ಸಹಿತವಾಗಿ ಎಲ್ಲವೂ ಅಚ್ಚುಕಟ್ಟಾಗಿ ಜೋಡಿಸಿದರೆ ಹಬ್ಬದ ಗಮ್ಮತ್ತೇ ಬೇರೆ. ಮಹಿಳೆಯರ ಅದ್ಭುತ ಕಲ್ಪನೆ ಅಲಂಕಾರದಲ್ಲಿ ಸಾಕಾರಗೊಂಡರೆ ಹಬ್ಬ ಸಾರ್ಥಕತೆ ಪಡೆದ ಹಾಗೆಯೇ. ■



